## 21. ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಭೋಗಿ, ಶಿಕಾರಿಪುರ ತಾ!!



2019-20 ನೇ ಸಾಲಿನಲ್ಲಿ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಭೋಗಿ, ಶಿಕಾರಿಪುರ ತಾ ಶಿವಮೊಗ್ಗ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಸಣ್ಣ ಗ್ರಾಮದ ಪುಟ್ಟ ಶಾಲೆ. ನಲಿಕಲಿ ವಿಧಾನ ಕನ್ನಡ ಶಾಲೆಗಳಲ್ಲಿರುವ ವಿಧಾನದಲ್ಲಿದಂತೆ ನಡೆಯುತ್ತಿರಲಿಲ್ಲ, ಹೀಗಾಗಿ ನಮ್ಮ ಶಿಕಾರಿಪುರ ತಾ ಮೂರು ಉರ್ದು ಕ್ಲಸ್ಟರ್ನ ಶಾಲೆಗಳಲ್ಲಿ ಬೋಧನೆ ಮಾಡುತ್ತಿರುವ ನಲಿ-ಕಲಿ ಶಿಕ್ಷಕರನ್ನು ಶಿಕಾರಿಪುರ ಬಿ ಆರ್ ಸಿ ಯಲ್ಲಿ ಮಾನ್ಯ ಬಿ ಆರ್ ಓ ಶ್ರೀ ಟಿ ಎಸ್ ಮುರಳಿಧರ್ ರವರು 2019-20 ನೇ ಸಾಲಿನಲ್ಲಿ ಕನ್ನಡ ಶಾಲೆಗಳಿಗೆ 3 ಕ್ಲಸ್ಟರ್ ನ ಉರ್ದು ಶಿಕ್ಷಕರನ್ನು ಕನ್ನಡ ಶಾಲೆಗಳಿಗೆ ಕನ್ನಡ ನಲಿ-ಕಲಿ ಬೋಧನೆ ಮಾಡುವ ಕ್ರಮದ ವೀಕ್ಷಣೆ ಮಾಡಲು 3 ತಂಡಗಳಲ್ಲಿ ಪೂರ್ವಾಹ್ನದವರೆಗೂ ಅವಕಾಶ ಮಾಡಿಕೊಡಲಾಗಿತ್ತು, ನಂತರ ಅಪರಾಹ್ನ ಅವಧಿಯಲ್ಲಿ 3 ಕ್ಲಸ್ಟರನ ವೀಕ್ಷಣೆ ಮಾಡಿದ ಮೂರು ತಂಡಗಳಲ್ಲಿನ ಶಿಕ್ಷಕರನ್ನು ಮಾನ್ಯ ಶ್ರೀ ಬಿ ಆರ್ ಓ ರವರು ಪ್ರಶ್ನೆಗಳನ್ನು ಕೇಳಿದರು ಇದರಲ್ಲಿ ಪ್ರಮುಖ ಸಮಸ್ಯೆ ತಟ್ಟಚಲನೆಯಾಗಿತ್ತು ಹಾಗೂ ಎಲ್ಲಾ ಮಕ್ಕಳಿಗೂ ಪ್ರಗತಿ ನೋಟದಲ್ಲಿ ತಾವು ಕಲಿತ ಮೆಟ್ಟಲುಗಳನ್ನು ಸ್ವತಃ ಗುರುತಿಸುವ ಸಮಸ್ಯೆ ಸರ್ವೇ ಸಾಮಾನ್ಯವಾಗಿತ್ತು, ನಲಿಕಲಿ ಪಾಠದ ವೀಕ್ಷಣೆ ನಂತರ ಬಿ ಆರ ಓ ರವರು ನಲಿಕಲಿ ವಿಧಾನದಂತೆ ಉರ್ದು ಶಾಲೆಗಳಲ್ಲಿಯೂ ಕೂಡ ಶೇ 100 ಸಾಧನೆ ಆಗಬೇಕೆಂದು ತಿಳಿಸಿದರು, ಅದಕ್ಕೋಸ್ಕರ ಶಿಕಾರಿಪುರ 3 ಉರ್ದು ಸಿ ಆರ್ ಪಿಗಳಿಗೆ ಶಾಲಾ ಭೇಟಿ ಅವಧಿಯಲ್ಲಿ ನಲಿಕಲಿ ಕೊಠಡಿಗೆ ಹೋಗಬೇಕೆಂದು ಕುಂದುಕೊರತೆ, ಕಲಿಕೆಯಲ್ಲಿ ಹಿಂದುಳಿಯುವುದರ ಬಗ್ಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕೆಂದು ಸೂಚನೆ ನೀಡಿರುತ್ತಾರೆ.

. ನಮ್ಮ ಶಾಲೆಯಲ್ಲಿ ನಲಿಕಲಿ ಹಂತಗಳನ್ನು ಅಂದರೆ 1 ) ವಾಲ್ ಸ್ಲೇಟ್ ಪಾಟಿ ರೂಪದಲ್ಲಿ ರಚಿಸಲಾಗಿತ್ತು ನಂತರ 2 ನೇ ಹಂತ ಕಾರ್ಡಗಳನ್ನು ವಿಷಯವಾರು ಲೋಗೋವಾರು ಮಟ್ಟಿಲುಗಳ ಪ್ರಕಾರ ಚಟುವಟಿಕೆಗಳ ಪ್ರಕಾರ ಜೋಡಿಸಿ ಮಕ್ಕಳಿಗೆ ಸುಲಭ ರೀತಿಯಲ್ಲಿ ಸಿಗುವಂತೆ ಜೋಡಿಸಲಾಗಿತ್ತು, ಕಲಿಕಾ ಸಾಮಾಗ್ರಿಗಳನ್ನು ಶಿಕ್ಷಕರು ಹಾಗೂ ಮಕ್ಕಳ ಸಹಾಯದೊಂದಿಗೆ, ಅನುಪಯುಕ್ತ ಸಾಮಾಗ್ರಿಗಳಿಂದ ಕಡ್ಡಿ

ಬೀಜಗಳು ಕಲ್ಲುಗಳು ಇತ್ಯಾಧಿಗಳನ್ನು ಬಳಸಿ ಕಲಿಕಾ ಉಪಕರಣಗಳಾಗಿ ತಯಾರಿಸಿ ಬಳಸಲಾಗಿತ್ತು. ನಂತರ ಗುಂಪು ತಟ್ಟೆಗಳಿಗೆ ಆಕರ್ಷಕವಾದ ನೈಸರ್ಗಿಕ ಚಿತ್ರಗಳನ್ನು ಐದು ತಟ್ಟೆಗಳಲ್ಲಿ ಬಣ್ಣಗಳಿಂದ ಚಿತ್ರಿಸಲಾಗಿತ್ತು. ಅದೇ ರೀತಿ ಆರನೇ ತಟ್ಟೆಯ ಉಪಯೋಗ ಹಾಗೂ ಬಳಕೆಯ ಬಗ್ಗೆ ಮಕ್ಕಳಿಗೆ ತಿಳಿಸಲಾಗಿತ್ತು , ಪ್ರಗತಿ ನೋಟ ಹವಾಮಾನ ನಕಾಶೆ. ಅದರಲ್ಲಿ ಮಕ್ಕಳು ಕಲಿತ ಮೆಟ್ಟಿಲುಗಳನ್ನು ಸ್ವತಃ ಗುರುತಿಸಿ ದಾಖಲೆ ಮಾಡಲು ಅವಕಾಶ ನೀಡಲಾಗಿತ್ತು. ಕಲಿಕಾ ಚಪ್ಪರದಲ್ಲಿ ತಾನು ಮಾಡಿದ ಚಿತ್ರಗಳನ್ನು ಸಂಖ್ಯಾ ಸೂಚಕ ಫಲಕಗಳನ್ನು, ಅಕ್ಷರ ಮಾದರಿಗಳು, ಪ್ಲಾಸ್ಟಿಕ್ ಕಾರ್ಡುಗಳನ್ನು ಚಪ್ಪರದಲ್ಲಿ ಕಟ್ಟಿ ಪ್ರದರ್ಶಿಸಲಾಗಿತ್ತು.

ಅಭ್ಯಾಸ ಪುಸ್ತಕಗಳನ್ನು ಕಲಿಕಾ ವಿಷಯಗಳಿಗೆ ಅನುಗುಣವಾಗಿ ಮನೆಗಳಿಗೆ ತೆಗೆದುಕೊಂಡು ಹೋಗಲು ಅವಕಾಶ ಮಾಡಿಕೊಡಲಾಗಿತ್ತು. ಎಲ್ಲಾ ಮಕ್ಕಳಿಗೂ ಸೂಕ್ತ ಸ್ಥಳಾವಕಾಶ ಮಾಡಿಕೊಡಲಾಗಿತ್ತು, ಅಭಿವ್ಯಕ್ತಿ ಸ್ವಾತಂತ್ರ್ಯ ಚಟುವಟಿಕೆಗಳನ್ನು ಮಾಡಲು ಹೇಳಲು ಸಂಪೂರ್ಣ ಸ್ವಾತಂತ್ರ್ಯ ನೀಡಲಾಗಿತ್ತು.

ಒಟ್ಟಾರೆ ಈ ಮೈಕ್ರೋ ಅಧ್ಯಯನದಿಂದ ಶಿಕ್ಷಕರ ತಪ್ಪನ್ನು ತಿದ್ದಲು ಒಂದು ಅವಕಾಶವಾಗಿದ್ದು , ಉತ್ತಮ ಕಲಿಕೆಗಾಗಿ ಇಂತ ಒಂದು ಅವಲೋಕನ ಅಗತ್ಯವಿರುತ್ತದೆ. ಇದರಿಂದ ಮಕ್ಕಳ ಕಲಿಕೆ ಉತ್ತಮ ಮಾಡಲು ಹಾಗೂ ಪೋಷಕರಲ್ಲಿ ನಲಿಕಲಿ ವಿಧಾನದಿಂದ ಖಾಸಗಿ ಶಾಲೆಗಳಿಗೆ ನಾವು ಸ್ಪರ್ಧೆ ಮಾಡಬಹುದು ಎಂಬ ಅಂಶವನ್ನು ಸ್ವತಃ ಎಸ್ ಡಿ ಎಂ ಸಿ ರವರು ವ್ಯಕ್ತ ಪಡಿಸಿರುತ್ತಾರೆ. ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಶಾಲೆ ಭೋಗಿ 2019-20 ನೇ ಸಾಲಿನಲ್ಲಿ A+ ಗ್ರೇಡ್ ನ್ನು ಪಡೆದಿರುತ್ತೇವೆ, ಇದಕ್ಕೆ ಮೂಲಕಾರಣ ಕರ್ತರು ನಮ್ಮ ಮಾನ್ಯ ಬಿಇಒ ಶ್ರೀ ಉಮಾಮಹೇಶ್ ರವರು ಮತ್ತು ಬಿ.ಆರ್.ಓ ಮಾನ್ಯ ಟಿ.ಎಸ್.ಮುರಳೀಧರ್ ಸರ್ ಅವರು ನಮಗೆ ಮಾರ್ಗದರ್ಶಕರಾಗಿರುತ್ತಾರೆ.

2019-20 ನೇ ಸಾಲಿನಲ್ಲಿ ಶಿಕ್ಷಕರ ದಿನಾಚರಣೆಯೆಂದು ಉತ್ತಮ ನಲಿಕಲಿ ಶಾಲೆಗಳೆಂದು ಗುರುತಿಸಿ, ಆ ದಿನ ನಮಗೆ ಬಹುಮಾನವಾಗಿ ರಾಜ್ಯ ಸರ್ಕಾರದಿಂದ 5000 ರೂಗಳನ್ನು ನೀಡಲಾಗಿದೆ. ಇದರಲ್ಲಿ ನಲಿಕಲಿಗೆ ಸಂಬಂಧಿಸಿದಂತೆ ಕಲಿಕೋಪಕರಣಗಳನ್ನು ಖರೀದಿಸಲು ಮತ್ತು ತಯಾರಿಕೆಗಾಗಿ ಬಳಸಲಾಗಿದೆ ಹಾಗೂ ಗ್ರಾಮದ ಹಳೆ ವಿದ್ಯಾರ್ಥಿ ಸಂಘವತಿಯಿಂದ ಸುಮಾರು 15000 ರೂ.ಗಳನ್ನು ದೇಣಿಗೆ ಪಡೆದು ನಲಿಕಲಿ ಕೊಠಡಿಗಾಗಿ ಒಂದು ಇಂಚಿನ ಪ್ಲೇವುಡ್ ನಲ್ಲಿ ನಲಿಕಲಿ ಕಾರ್ಡ್ ಇಡುವ ವ್ಯವಸ್ಥೆ ಮಾಡಲಾಗಿದೆ, ಅದೇ ರೀತಿ ಈ ಹಣ ಬಳಸಿ ದುಂಡು ಮೇಜಿನಂತೆ ತಟ್ಟೆಯನ್ನು ತಯಾರಿಸಿದ್ದು ಅದಕ್ಕೆ ಪ್ರತ್ಯೇಕ ನೈಸರ್ಗಿಕ ಬಣ್ಣವನ್ನು ಕೊಟ್ಟು ಮಕ್ಕಳಿಗೆ ಆಕರ್ಷವಾದ ರೀತಿಯಲ್ಲಿ ನಲಿಕಲಿ ಪದ್ಧತಿಯನ್ನು ಅಳವಡಿಸಲಾಗಿದ್ದು ಹಾಗು ಈ ದುಂಡು ಮೇಜಿನ ತಟ್ಟೆಗಳಿಗೆ ಉತ್ತಮವಾದ ಪ್ಲಾಸ್ಟಿಕ್ ಚೇರ್ ಗಳ ವ್ಯವಸ್ಥೆಯನ್ನು ಮಾಡಲಾಗಿದೆ, ಅದೇ ರೀತಿ ಪೊಪೆಟ್ ಷೋ ನಲ್ಲಿ ಅನೇಕ ಪ್ರಾಣಿಗಳ ಸಂಕೇತಗಳನ್ನು ಬಳಸಿ ಅಂದರೆ ಆನೆ, ಜಿಂಕೆ, ನಾಯಿ, ಸಿಂಹ, ಹುಲಿ, ಬೆಕ್ಕು, ಮೊಸಳೆ ಮುಂತಾದ ಪೊಪೆಟ್ ಗಳನ್ನು ಬಳಸಿ ಮಕ್ಕಳಿಗೆ ಕಥೆಯ ಮೂಲಕ ಪಾಠವನ್ನು ಮನದಟ್ಟುವಾಗುವಂತೆ ಹೇಳಿಕೊಡಲಾಗುತ್ತಿದೆ.

ಮೆಟ್ಟಿಲುವಾರು ಕಲಿಕಾಪೋಕರಣ ತಯಾರಿಸಿ ಕಲಿಕಾ ಚಪ್ಪರದಲ್ಲಿ ಪ್ರದರ್ಶಿಸಲಾಗುತ್ತದೆ, ಅದೇ ರೀತಿಯಾಗಿ ವಾಲ್ ಸ್ಲೇಟ್ ನಲ್ಲಿ ವಿವಿಧ ಆಕಾರದ ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ಬಿಡಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಹಾಗೂ ಅಭ್ಯಾಸ ಪುಸ್ತಕವನ್ನು ಸೂಕ್ತ ರೀತಿಯಲ್ಲಿ ಬಳಸಿ ಕಲಿಕೆಗೆ ಸಂಬಂಧಿಸಿದ ಅಂಶಗಳನ್ನು ಮಕ್ಕಳಿಗೆ ಹೇಳಿಕೊಡಲಾಗುತ್ತದೆ. ಹಾಗು ನಲಿಕಲಿಯಿಂದ ಶಿಕ್ಷಕರು ಹಾಗೂ ಮಕ್ಕಳು ಖುಷಿಯಿಂದ

ಭಾಗವಹಿಸುತ್ತಿದ್ದಾರೆ. ಮಕ್ಕಳು ಹೆಚ್ಚಾಗಿ ಆಟದಲ್ಲಿ ಆಸಕ್ತಿ ಹೊಂದಿದ ಕಾರಣ ಗಣಿತದಲ್ಲಿ ಸಂಖ್ಯೆಗಳನ್ನು ಪ್ಲಾಸ್ಟಿಕ್ ಮಾದರಿಯಲ್ಲಿ ಮುಟ್ಟಿ ನೋಡುವಂತಹ ಹಾಗೂ ಅದರ ಚಿತ್ರ ಹಾಗೂ ಬರವಣಿಗೆ ಸ್ವರೂಪವನ್ನು ಸುಲಭವಾಗಿ ತಿಳಿಸಿಕೊಡಲಾಗುತ್ತದೆ.

ಭಾಷೆಗೆ ಬಂದರೆ ಉರ್ದು ಒಂದು ಹಿಂದಿ ಭಾಷೆಯ ತಂಗಿಯಾಗಿದ್ದು, ಎರಡು ರೀತಿಯ ಮೂಲ ಅಕ್ಷರಗಳನ್ನು ಕಲಿಯಲು ಸಲುಭವಾದ ವಿಧಾನ ನಲಿಕಲಿಯಾಗಿದೆ, ಇದ್ದರಿಂದ ಒಟ್ಟಾರೆ ನಮ್ಮ ಶಾಲೆಯಲ್ಲಿ ಮಕ್ಕಳ ಕಲಿಕೆ ಉತ್ತಮವಾಗಿದ್ದು ಮುಂದಿನ ತರಗತಿಗಳಿಗೆ ಮನೋಶಾಸ್ತ್ರದ ಮಾತಿನಂತೆ ಮುಂದಿನ ಅಭ್ಯಾಸಕ್ಕಾಗಿ ಈ ವಿಧಾನ ಸಹಕಾರಿಯಾಗಿದೆ, ಆದ್ದರಿಂಧ ಪೋಷಕರು ತಮ್ಮ ಮಕ್ಕಳ ಕಲಿಕೆ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸುತ್ತಾರೆ ಹಾಗೂ ನಮ್ಮ ಶಾಲೆಯಲ್ಲಿ 5ನೇ ತರಗತಿಯಲ್ಲಿ ಸತತ 2012 ರಿಂದ ಅಲ್ಪಸಂಖ್ಯಾತ ಮೊರಾರ್ಜಿ ದೇಶಾಯಿ ಶಾಲೆಗೆ ಆಯ್ಕೆಯಲ್ಲಿ ನೂರರಷ್ಟು ಫಲಿತಾಂಶವನ್ನು ನೀಡಲಾಗಿದೆ, ನಲಿಕಲಿ ವಿಧಾನದಿಂದ ನಮ್ಮ ವೈಯಕ್ತಿಕ ಅಭಿಪ್ರಾಯ ಇದಾಗಿದ್ದು ಖಾಸಗಿ ಶಾಲೆಗೆ ನಾವು ಸ್ಪರ್ದೆ ಮಾಡಬಹುದು ಎಂಬಂತಾಗಿದೆ ಹಾಗೂ ನಲಿಕಲಿ ವಿಧಾನದಿಂದ ಮಕ್ಕಳ ಕಲಿಕೆ ಉತ್ತಮವಾಗಿದೆ. ಆಫ್ರಿಕಾದ ಒಂದು ವಿಶ್ವವಿದ್ಯಾಲಯದ ದ್ವಾರದಲ್ಲಿ ಒಂದು ಮಾತು ಬರೆಯಲಾಗಿತ್ತು ಅದೇನೆಂದರೆ " ಒಂದು ದೇಶವನ್ನು ಹಾಳುಮಾಡಬೇಕಾದರೆ ಅಣುಸಾಮಾಗ್ರಿಗಳನ್ನು ಉಪಯೋಗಿಸಬೇಕಾಗಿಲ್ಲ. ಅಲ್ಲಿನ ಶಿಕ್ಷಣ ವ್ಯವಸ್ಥೆಯನ್ನು ಹಾಳುಮಾಡಿದರೆ ಸಾಕು, ವೈದ್ಯರು ರೋಗಿಗಳನ್ನು ಕೊಲ್ಲುತ್ತಾರೆ, ಇಂಜಿನಿಯರಗಳು ರಸ್ತೆ ಕಟ್ಟಡ ಅಣೆಕಟ್ಟುಗಳನ್ನು ಹಾಳುಮಾಡುತ್ತಾರೆ," ಆದ್ದರಿಂದ ಇದಕ್ಕಿಂತ ಮಹತ್ವವಾದ ಮಾತನ್ನು ಬೇರೆ ಎಲ್ಲಿಂದಲೂ ಸಂಪಾದಿಸಲು ಸಾಧ್ಯವಿಲ್ಲ.













